ಕರ್ನಾಟಕ ಸರ್ಕಾರ

ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, ಸಂಪಿಗೆ ರಸ್ತೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-12.

ಸಂಖ್ಯೆ: ಪಪೂಶಿಇ/ಪರೀಕ್ಷೆ/ನೊ&ಫ/2018-19. ದಿನಾಂಕ: -05-2018

**ಸುತ್ತೋಲೆ**

**ವಿಷಯ:** ಮಾರ್ಚ್-2018ರ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯಲ್ಲಿ ಉತ್ತೀರ್ಣ ವಿಷಯಗಳ ಫಲಿತಾಂಶ ತಿರಸ್ಕರಿಸಿ ಜೂನ್-2018ರ ದ್ವಿತೀಯ ಪಿಯುಸಿ ಪೂರಕ ಪರೀಕ್ಷೆಗೆ ಅರ್ಜಿ ಸಲ್ಲಿಸುವ ಬಗ್ಗೆ.

**ಉಲ್ಲೇಖ:** ಸಮ ಸಂಖ್ಯೆ ಸುತ್ತೋಲೆ ದಿನಾಂಕ 30-04-2018

* * * * *

2018ರ ಮಾರ್ಚ್ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯ ಫಲಿತಾಂಶ ಪ್ರಕಟಣೆಯ ನಂತರದಲ್ಲಿ ಜೂನ್-2018ರ ದ್ವಿತೀಯ ಪಿಯುಸಿ ಪೂರಕ ಪರೀಕ್ಷೆಗೆ ಅರ್ಜಿ ಸಲ್ಲಿಸುವ ಬಗ್ಗೆ ಉಲ್ಲೇಖಿತ ಸುತ್ತೋಲೆಯಲ್ಲಿ ಸೂಚನೆಗಳನ್ನು ನೀಡಲಾಗಿತ್ತು.

ಮಾರ್ಚ್-2018ರ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳು ನಿಯಮಾನುಸಾರ ಫಲಿತಾಂಶ ತಿರಸ್ಕರಿಸಿ ಜೂನ್-2018ರ ದ್ವಿತೀಯ ಪಿಯುಸಿ ಪೂರಕ ಪರೀಕ್ಷೆ ಬರೆಯಲು ಇಚ್ಛಿಸಿದ್ದಲ್ಲಿ, ಅಂತಹ ವಿದ್ಯಾರ್ಥಿಗಳ ಮಾದರಿ ಉತ್ತೀರ್ಣ ಅಂಕಪಟ್ಟಿಯಲ್ಲಿ ಪೂರ್ಣ ವಿವರಗಳನ್ನು ಭರ್ತಿ ಮಾಡಿ ಉಲ್ಲೇಖಿತ ಸುತ್ತೋಲೆಯಲ್ಲಿ ತಿಳಿಸಲಾದ ಫಲಿತಾಂಶ ತಿರಸ್ಕರಣೆ ಶುಲ್ಕ ಮತ್ತು ಪರೀಕ್ಷಾ ಶುಲ್ಕಗಳನ್ನು ಕಟ್ಟಿಸಿಕೊಳ್ಳುವುದು.

ಸಮಯದ ಕೊರತೆ ಇರುವುದರಿಂದ 2018ರ ಮಾರ್ಚ್ ಪರೀಕ್ಷೆಯಲ್ಲಿ ಉತ್ತೀರ್ಣಗೊಂಡಿರುವ ವಿಷಯಗಳ ಫಲಿತಾಂಶಗಳನ್ನು ನಿಯಮಾನುಸಾರ ತಿರಸ್ಕರಣೆಗೆ ಮಂಜೂರಾತಿ ನೀಡಿ ಶುಲ್ಕಗಳನ್ನು ಪಡೆಯುವ ವಿಶೇಷ ಅನುಮತಿ ಪ್ರಾಂಶುಪಾಲರಿಗೆ ನೀಡಲಾಗಿದೆ. ಫಲಿತಾಂಶ ತಿರಸ್ಕರಣೆಗೆ ಸಂಬಂಧಿಸಿದ ನಿಯಮಗಳನ್ನು ಪ್ರಾಂಶುಪಾಲರು ವೈಯಕ್ತಿಕವಾಗಿ ಗಮನಹರಿಸಿ ಕ್ರಮವಹಿಸುವುದು. ಈ ಕುರಿತಂತೆ ನಿಯಮಗಳನ್ನು ಉಲ್ಲಂಘಿಸಿದಲ್ಲಿ ಪ್ರಾಂಶುಪಾಲರನ್ನೇ ನೇರವಾಗಿ ಹೊಣೆಗಾರರನ್ನಾಗಿಸಲಾಗುವುದು.

**ಉತ್ತೀರ್ಣ ವಿಷಯಗಳ ಫಲಿತಾಂಶ ತಿರಸ್ಕರಣೆಗೆ ಸಂಬಂಧಿಸಿದಂತೆ ಪಾಲಿಸಬೇಕಾದ ಸೂಚನೆಗಳು:**

1. ಎಲ್ಲಾ ವಿಷಯಗಳಲ್ಲಿ ಉತ್ತೀರ್ಣರಾದ ಅಭ್ಯರ್ಥಿಗಳು ಮಾತ್ರ ಫಲಿತಾಂಶ ತಿರಸ್ಕರಿಸಲು ಅರ್ಹರು
2. ಫಲಿತಾಂಶ ತಿರಸ್ಕರಿಸುವಾಗ EXEMPTION ದೊರೆತು ಉತ್ತೀರ್ಣಗೊಂಡಿರುವ ವಿಷಯಗಳ ಫಲಿತಾಂಶವನ್ನು ಸಹ ಕಡ್ಡಾಯವಾಗಿ ತಿರಸ್ಕರಿಸಲೇಬೇಕು. ಈ ನಿಯಮ ಭಾಗ-1 ಮತ್ತು ಭಾಗ-2 ಕ್ಕೆ ಪ್ರತ್ಯೇಕವಾಗಿ ಅನ್ವಯಿಸುತ್ತದೆ.
3. ಅರ್ಜಿಯನ್ನು ಸಂಬಂಧಪಟ್ಟ ಕಾಲೇಜಿನ ಪ್ರಾಚಾರ್ಯರ ಮುಖಾಂತರ ಸಲ್ಲಿಸಬೇಕು.
4. ದ್ವಿತೀಯ ಪಿಯುಸಿ ಪರೀಕ್ಷೆಯ ಮೂಲ ಪ್ರಮಾಣ ಪತ್ರದೊಂದಿಗೆ ಚಲಾನ್‌ನ ಮೂಲ ಪ್ರತಿಯನ್ನು ಲಗತ್ತಿಸಬೇಕು.
5. ಫಲಿತಾಂಶ ತಿರಸ್ಕರಣೆ ಅರ್ಜಿಯನ್ನು ಸಲ್ಲಿಸಲು ಕೊನೆಯ ದಿನಾಂಕ ಉಲ್ಲೇಖಿತ ಸುತ್ತೋಲೆಯಲ್ಲಿ ಸೂಚಿಸಿದಂತೆ.
6. ಪರೀಕ್ಷಾ ಫಲಿತಾಂಶ ತಿರಸ್ಕರಿಸಲು ಎರಡು ಅವಕಾಶಗಳನ್ನು ಮಾತ್ರ ಕೊಡಲಾಗುವುದು. ಪರೀಕ್ಷಾ ಫಲಿತಾಂಶ ತಿರಸ್ಕರಿಸಲು ಬಯಸುವ ಅಭ್ಯರ್ಥಿಗಳು ಮೊದಲು ಬಾರಿಗೆ ಹಾಜರಾಗಿ ಉತ್ತೀರ್ಣವಾದ ಪರೀಕ್ಷೆಯನ್ನು ಬಿಟ್ಟು ಮುಂಬರುವ ಅನುಕ್ರಮದ ಮೂರು ಪರೀಕ್ಷೆಗಳಲ್ಲಿ ಯಾವುದಾದರೂ ಎರಡು ಪರೀಕ್ಷೆಗಳಲ್ಲಿ ತಿರಸ್ಕರಣೆಯ ಅಧಿಕಾರ ಚಲಾಯಿಸಬಹುದು. (ಅಂದರೆ ಕ್ರಮವಾಗಿ ಬರುವ ಮೂರು ಪರೀಕ್ಷಾ ಅವಧಿಯಲ್ಲಿ ಯಾವುದಾದರೂ ಎರಡು ಅವಕಾಶವನ್ನು ಉಪಯೋಗಿಸಬಹುದು).
7. ದ್ವಿತೀಯ ಪಿಯುಸಿ ಪರೀಕ್ಷೆಯನ್ನು ಎಲ್ಲಾ ವಿಷಯಗಳಲ್ಲಿ ಮೊದಲ ಬಾರಿಗೆ ತೇರ್ಗಡೆರಯಾದ ನಂತರ ಆ ಪರೀಕ್ಷೆಯ ಫಲಿತಾಂಶವನ್ನು ತಿರಸ್ಕರಿಸಲು ಅನುಮತಿಯನ್ನು (ಮುಂಬರುವ ಮೊದಲ ಪರೀಕ್ಷೆಗೆ) ಪಡೆಯದೆ ಆ ನಂತರದ ಎರಡು ಪರೀಕ್ಷೆಗಳಲ್ಲಿ ಫಲಿತಾಂಶ ತಿರಸ್ಕರಣೆಗೆ ಅನುಮತಿ ಪಡೆಯಲು ಅರ್ಜಿ ಸಲ್ಲಿಸಿದಲ್ಲಿ ಅದರ ಜೊತೆ ಅಭ್ಯಾರ್ಥಿ ಯಾವುದೇ ಉಚ್ಚ ಶಿಕ್ಷಣ ಪಡೆಯುತ್ತಿಲ್ಲ ಹಾಗೂ ಉನ್ನತ ವ್ಯಾಸಂಗಕ್ಕಾಗಿ ದಾಖಲಾಗಿಲ್ಲವೆಂಬುದನ್ನು ಮತ್ತು ಸಂಬಂಧಿಸಿದ ಕಾಲೇಜಿನಿಂದ ವರ್ಗಾವಣೆ ಪತ್ರ ತೆಗೆದುಕೊಂಡಿಲ್ಲವೆಂಬುದಾಗಿ ₹ 20-00 ಛಾಪಾ ಕಾಗದದಲ್ಲಿ ನೋಟರಿ ಮುಂದೆ ಘೋಷಣೆ ಮಾಡಿದ ಮೂಲ ಘೋಷಣಾ ಪತ್ರವನ್ನು ಲಗತ್ತಿಸಬೇಕು. ಅಲ್ಲದೆ ವರ್ಗಾವಣೆ ಪತ್ರ ನೀಡಿಲ್ಲವೆಂಬುದ ಬಗ್ಗೆ ಸಂಬಂಧಿಸಿ ಕಾಲೇಜಿನ ಪ್ರಾಚಾರ್ಯರ ದೃಢೀಕರಣ ಪತ್ರ ಲಗತ್ತಿಸಬೇಕು.

Scanned by CamScanner

8. ಒಮ್ಮೆ ಫಲಿತಾಂಶ ತಿರಸ್ಕರಿಸಿದ ಮೇಲೆ ಹಿಂದಿನ ಅಂಕಗಳನ್ನು ಮನಃ ಪಡೆಯುವ ಅವಕಾಶವಿರುವುದಿಲ್ಲ. ಫಲಿತಾಂಶ ತಿರಸ್ಕರಿಸಿ ಪರೀಕ್ಷೆಗೆ ಹಾಜರಾಗಿ ಆ ಪರೀಕ್ಷೆಯಲ್ಲಿ ಪಡಿಯುವ ಅಂಕಗಳೇ ಅಂತಿಮವಾಗುತ್ತವೆ. ಹಿಂದಿನ ಪರೀಕ್ಷೆಯಲ್ಲಿ ಪಡೆದಿದ್ದ ಅಂಕಗಳ ಮನಃ ಸ್ಥಾಪನೆಗೆ (Restoration of Marks) ಅವಕಾಶವಿರುವುದಿಲ್ಲ.
9. ಫಲಿತಾಂಶ ತಿರಸ್ಕರಣೆಗೆ ಅನುಮತಿ ಪಡೆದವರು, ಇಚ್ಛಿಸಿದಲ್ಲಿ ಹಾಗೂ ಸಕಾರಣಗಳಿದ್ದಲ್ಲಿ ಪರೀಕ್ಷೆ ಪ್ರಾರಂಭಕ್ಕಿಂತ ಎರಡು ದಿನಗಳ ಮುಂಚಿತವಾಗಿ ನಿರ್ದೇಶನಾಲಯಕ್ಕೆ ಪ್ರಾಚಾರ್ಯರ ಮುಖಾಂತರ ಅರ್ಜಿ ಸಲ್ಲಿಸಿ ಈಗಾಗಲೆ ಪಡೆದಿರುವ ತಿರಸ್ಕರಣಾ ಅನುಮತಿಯನ್ನು ರದ್ದುಪಡಿಸಿಕೊಳ್ಳಬಹುದು.
10. ಅಪೂರ್ಣ ಅರ್ಜಿಗಳನ್ನು ತಿರಸ್ಕರಿಸಲಾಗುವುದು. ಅರ್ಜಿಯಲ್ಲಿನ ಅನ್ವಯಿಸದ ಪದ ವಾಕ್ಯಗಳನ್ನು ಹೊಡೆದು ಹಾಕುವುದು
11. ತಿರಸ್ಕರಣಾ ಶುಲ್ಕ ಪ್ರಥಮ ಬಾರಿಗೆ ಪ್ರತಿ ವಿಷಯಕ್ಕೆ ₹ 175–00 ರಂತೆ ದ್ವಿತೀಯ ಹಾಗೂ ಅಂತಿ ಬಾರಿಗೆ ಪ್ರತಿ ವಿಷಯಕ್ಕೆ ₹ 350–00 ರಂತೆ ಖಜಾನೆ ಮೂಲಕ ಲೆಕ್ಕಶೀರ್ಷಿಕೆ 0202–01–102–1–07 ಸಂಖ್ಯೆಗೆ ಪಾವತಿಸಿ ಮೂಲ ಚಲನ್‌ನ್ನು ಅರ್ಜಿಯೊಂದಿಗೆ ಸಲ್ಲಿಸುವುದು.
12. ಪಾವತಿಸಲಾದ ಶುಲ್ಕವನ್ನು ಯಾವುದೇ ಕಾರಣದಿಂದ ವಾಪಸ್ಸು ಮಾಡಲಾಗುವುದಿಲ್ಲ ಅಥವಾ ಮನಃ ಹೊಂದಾಣಿಕೆ ಮಾಡಲಾಗುವುದಿಲ.
13. ಅರ್ಜಿಯಲ್ಲಿನ 3ನೇ ಕಾಲಂನಲ್ಲಿ ನೀಡಿರುವ ಸೂಚನೆಯನ್ನು ಸರಿಯಾಗಿ ಓದಿ ಅರ್ಥಮಾಡಿಕೊಂಡು ಭರ್ತಿ ಮಾಡುವಂತೆ ಸೂಚಿಸಿದೆ.

10/5/18

ನಿರ್ದೇಶಕರು
ಪದವಿ ಪೂರ್ವ ಶಿಕ್ಷಣ ಇಲಾಖೆ.

**ಪ್ರತಿ:**

1. ಎಲ್ಲಾ ಜಿಲ್ಲಾ ಉಪನಿರ್ದೇಶಕರು, ಪ.ಪೂ.ಶಿ.ಇ. (ತಮ್ಮ ಜಿಲ್ಲೆಯ ಎಲ್ಲಾ ಕಾಲೇಜುಗಳಿಗೆ ಮಾಹಿತಿ ನೀಡಲು)
2. ಕಛೇರಿ ಪ್ರತಿ.

Scanned by CamScanner